ನೀವು ಕೊಟ್ಟಿರುವಂಥ ಕಾಮನ್ ಮಿನಿಮಮ್ ಪ್ರೊಗ್ರಾಮ್‌ನಲ್ಲಿ 500 ರೂ.ನಂತೆ ನಿರುದ್ಯೋಗಿ ಯುವಕರಿಗೆ ಭತ್ಯೆ ಕೊಡುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ, ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ಬಲಪಡಿಸುವುದಕ್ಕೆ ವಿಶೇಷ ಬ್ಯಾಂಕ್, ಇವುಗಳು ತಾನೇ ನಿಮ್ಮ ಮೇಜರ್ ಪ್ರೊಗ್ರಾಮ್‌ಗ? ಈ ಮೂರರ ಬಗ್ಗೆ ಏನಾದರೂ ತಾವು ಸ್ಪಷ್ಟವಾದ ಉತ್ತರವನ್ನು ನಿಮ್ಮಿಂದ ನಾವು ನಿರೀಕ್ಷೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಅಂಜನೇಯ : ಮಾನ್ಯ ಅಧ್ಯಕ್ಷರೇ, ನೀರಾವರಿ ಬಗ್ಗೆ ಒಂದೆರಡು ಮಾತುಗಳನ್ನಾದರೂ ಹೇಳಿ ಸಾರ್. ಅಪ್ಪರ್ ಭದ್ರಾ ಬಗ್ಗೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಅದನ್ನು ಬಜ್ಟ್‌ನಲ್ಲಿ ನೋಡೋಣ. ನಾನು ಹೇಳುತ್ತೇನೆ. ಇದು ರಾಜ್ಯಪಾಲರ ಭಾಷಣ ಮುಂದೆ ಬಜೆಟ್‌ನಲ್ಲಿ ಅದನ್ನು ಮಾಡುವುದು. ಸ್ತ್ರೀಶಕ್ತಿಯ ಬಗ್ಗೆ ಈಗಾಗಲೇ ಅದರ ಬಗ್ಗೆ ಹೇಳಿದ್ದೇನೆ. ಹೆಚ್ಚಿಗೆ ಹಣವನ್ನು ಆ ಸಹಕಾರ ಸಂಘಗಳಿಗೆ ಕೊಡುವುದಕ್ಕೆ ಹೇಳಿದ್ದೇನೆ. ಮುಂದೆ ಬಜೆಟ್‌ನಲ್ಲೂ ಕೂಡ ನೋಡಿ ಇದು ಬಹಳ ಮುಖ್ಯವಾದ ಕಾರ್ಯಕ್ರಮ, ಆ ಬ್ಯಾಂಕಿಗೆ ನಾವು ಗ್ಯಾರಂಟಿಯನ್ನು ಕೊಟ್ಟೆವು. ಅದನ್ನೂ ಕೂಡ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೇನೆ. ಬೆಳೆ ವಿಮೆ ಬಗ್ಗೆ 270 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಕೆಲವು ಕಡೆಗೆ ಹೋಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಡುಗಡೆ ಮಾಡಿದ ಬಗ್ಗೆ ಅಲ್ಲ ಸಾರ್. ಸರ್ವೆ ಮಾಡಿದ್ದೇ ಸರಿ ಇಲ್ಲ. ಅದರ ಬಗ್ಗೆ ತನಿಖೆ ಮಾಡಿಸಿ ಎಂದು ಕೇಳುತ್ತಿದ್ದೇನೆ.

Sri N. Dharm Singh : We are conducting C.O.D. enquiry. ಎಲ್ಲಿ ಆಗಿಲ್ಲ ಸರಿಯಾಗಿ ಎಂದು ನೋಡುತ್ತೇನೆ. ಅದು ಬಂದಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ. ಮಾಡುತ್ತೇವೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಸಿ.ಓ.ಡಿ. ತನಿಖೆಯಿಂದ ಬಗೆಹರಿಯುವ ಸಮಸ್ಯೆಯಲ್ಲ ಸಾರ್ ಅದು. 32 ಹೋಬಳಿಯಲ್ಲಿ ವೈಜ್ಞಾನಿಕವಾಗಿ ಸರ್ವೆಯಾಗಿಲ್ಲ. ಅಲ್ಲಿ ಅನ್ಯಾಯವಾಗಿದೆ. ಅದನ್ನು ಸರಿಪಡಿಸಬೇಕೆಂದು ಕೇಳುತ್ತೇವೆ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ಮಾಡೋಣ

(ಗೊಂದಲ)

Sri Manohar Kaliappa Kinekar : For the agricultural pumpsets, you are disconnecting the connection.

(INTERRUPTIONS)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಯಾವುದೇ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಇಲ್ಲ. ನಾವು ನಿಮಗೆ ಮೊದಲನೆಯದು ವಿನಂತಿ ನೀವೇ ಡಿಕ್ಲೇರ್ ಮಾಡಿದಂಥ ರೇಷನ್ ಕಾರ್ಡುಗಳು. ರೀಸರ್ವ್ ಆಗುವವರೆಗೆ ಅವರಿಗೆಲ್ಲಾ ಮುಂದುವರೆಸಿ ಎಂದು ನಾನು ವಿನಂತಿಯನ್ನು ಮಾಡಿದೆವು. ಬೆಳೆ ವಿಮೆ ಬಗ್ಗೆ ಅವರು ವೈಜ್ಞಾನಿಕವಾಗಿ ಸಮೀಕ್ಷೆಯನ್ನು ಮಾಡದೆ ರೈತರು ಕಣ್ಣೀರು

ಹಾಕುತ್ತಿದ್ದಾರೆ. ಅದರೆ ಎಲ್ಲರಿಗೂ ಆ ಬೆಳೆ ವಿಮೆ ಸಿಗುವ ಹಾಗೆ ಮಾಡಿ ಎಂದು ನಾವು ಕೇಳಿದೆವು. ನೀವೇ ಹೇಳಿರುವುದು ನಿರುದ್ಯೋಗಿ ಯುವಕರಿಗೆ 500 ರೂ. ಭತ್ಯೆ ಕೊಡುತ್ತೇವೆಂದು ಈಗಲೂ ನೀವು ಜಾಯಿಂಟ್ ಆಗಿ ನಿಮ್ಮಕಾಮನ್ ಮಿನಿಮಮ್ ಪ್ರೋಗ್ರಾಮ್‌ನಲ್ಲಿ ಸೇರಿದೆ. ಅದನ್ನು ಮಾಡುವುದಕ್ಕೂ ರೆಡಿ ಇಲ್ಲ. ಬೋರ್‌ವೆಲ್‌ಗಳಿಗೆ ಮಾರ್ಚ್‌ವರೆಗಾದರೂ ಉಚಿತ ವಿದ್ಯುತ್ ಕೊಡಿ ಎಂದು ಹೇಳಿದೆವು. ಅದಕ್ಕೂ ನೀವು ಸ್ಪಷ್ಟವಾದ ಉತ್ತರವನ್ನು ಕೊಡುತ್ತಿಲ್ಲ. ನಮಗೆ ಯಾವುದೇ ಸಮರ್ಪಕವಾದ ಉತ್ತರ ಕೊಡಲಿಲ್ಲ. ನಮಗೆ ಸಮಾಧಾನ ಇಲ್ಲ. ಅದಕ್ಕೆ ನಾವು ಅನಿವಾರ್ಯವಾಗಿ ವಾಕ್‌ಔಟ್ ಮಾಡಿ ನಾವು ಹೊರಗಡೆ ಹೋಗುತ್ತೇವೆ. ನೀವು ಏನಾದರೂ ಮಾಡಿಕೊಳ್ಳಿ.

(ಈ ಹಂತದಲ್ಲಿ ವಿರೋಧ ಪಕ್ಷದವರಾದ ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "2005ರ ಜನವರಿ 20 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ, ದಯಪಾಲಿಸಿ ಮಾಡಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು, ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುವುದು".

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ಅಧ್ಯಕ್ಷರು : ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಗುವುದು.

4. ಖಾಸಗಿ ಸದಸ್ಯರ ನಿರ್ಣಯ

ಅಧ್ಯಕ್ಷರು : ಮಾನ್ಯ ಕೆ.ಆರ್. ರಮೇಶ್‌ಕುಮಾರ್ ಅವರು ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ದಿನಾಂಕ: 23–07–2004 ರಂದು ಮಂಡಿಸಿದ ಕೆಳಕಂಡ ನಿರ್ಣಯದ ಮೇಲೆ ಚರ್ಚೆ.

"ಇಡೀ ರಾಜ್ಯಾದ್ಯಂತ ಯಾವುದೇ ವರ್ಗದ, ಮತದ, ಧರ್ಮದ ಜನ ವಿವಾಹ ಕಾರ್ಯಕ್ರಮಗಳನ್ನು ಕುಟುಂಬಗಳಿಗೆ ಸೀಮಿತಗೊಳಿಸುವ ಮೂಲಕ ವ್ಯಾಪಾರೀಕರಣವನ್ನು ವೈಭವೀಕರಣವನ್ನು ನಿಲ್ಲಿಸುವ ದೃಷ್ಟಿಯಿಂದ ಈ ಸದನವು ಒಂದು ಹೊಸ ಶಾಸನವನ್ನು ರಚಿಸಲು ನಿರ್ಣಯಿಸುತ್ತದೆ".

ಈಗ ವಾಟಾಳ್ ನಾಗರಾಜ್‌ರವರು. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಊಟಕ್ಕೆ ಹೋಗಿ ಬಂದಮೇಲೆ ಶುರು ಮಾಡಿ ಸಾರ್.

ಅಧ್ಯಕ್ಷರು : ಈಗ ಊಟ ಆದಮೇಲೆ ತೆಗೆದುಕೊಳ್ಳೋಣವಾ ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ. ಊಟ ಆದಮೇಲೆ ತೆಗೆದು ಕೊಳ್ಳುತ್ತೇನೆ. ಒಂದು, ನನಗೆ ತಾವು ಭಾಷಣಕ್ಕೆ ಅವಕಾಶ ಕೊಡಲಿಲ್ಲ. ಅಲ್ಲಿ ಧರಣಿ ಮಾಡಿದಾಗ ಮಾತನಾಡಿರತಕ್ಕ ಮಾತುಗಳನ್ನೆಲ್ಲಾ ಕಡತದಿಂದ ತೆಗೆಯಿರಿ ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ.

ಅಧ್ಯಕ್ಷರು : ವೆಲ್‌ನಲ್ಲಿ ಕುಳಿತುಕೊಂಡು ಮಾತನಾಡಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್ : ನಾನು ಮಾತನಾಡಿದ ಉದ್ದೇಶ ಇಲ್ಲಿ ಮುಕ್ತ ವಾತಾವರಣಕ್ಕೆ ಎಲ್ಲೋ ಒಂದು ಕಡೆ ಬೂದಿಮುಚ್ಚಿದ ಕೆಂಡ ಆದಹಾಗೆ ಆಗಿದೆ. ಎಲ್ಲೋ ಒಂದು ಕಡೆ ನಮ್ಮ